**ಹಿರಿಯ ಸಿವಿಲ್ ಜಡ್ಜ್ ಮತ್ತು ಜೆ. ಎಂ. ಎಫ್.ಸಿ., ನ್ಯಾಯಾಲಯ ಚನ್ನಪಟ್ಟಣ ಚನ್ನಪಟ್ಟಣ.**

**ಸಿ.ಸಿ. ಸಂಖ್ಯೆ:493/2022**

ಚಾಸಾಃ 8 ಪ್ರಾಸಾಃ7

| | | |
|---|---|---|
| ಹೆಸರು | : | ಎಸ್ ಟಿ ಸುರೇಶ್ |
| ಗಂಡನ/ತಂದೆಯ ಹೆಸರು | : | ಲೇಟ್ ತಿಮ್ಮೇಗೌಡ |
| ವಯಸ್ಸು | : | 63ವರ್ಷ |
| ಉದ್ಯೋಗ | : | ನಿವೃತ್ತ ಎಎಸ್ಐ |
| ವಾಸ | : | ಚನ್ನಪಟ್ಟಣ |

**ದಿನಾಂಕ 04.02.2026 ರಂದು ಸಾಕ್ಷಿಯನ್ನು ಕರೆಸಲಾಯಿತು. ಪ್ರಮಾಣ ವಚನ ಬೋಧಿಸಲಾಯಿತು.**

**ಮುಖ್ಯವಿಚಾರಣೆಃ ಮಾನ್ಯ ಎಪಿಪಿ ಯವರಿಂದಃ**

ನಾನು 2021 ರಿಂದ 2023 ರವರೆಗೆ ಎಂ ಕೆ ದೊಡ್ಡಿ ಪೊಲೀಸ್ ಠಾಣೆಯಲ್ಲಿ ಎ ಎಸ್ ಐ ಆಗಿ ಕರ್ತವ್ಯ ನಿರ್ವಹಿಸಿದ್ದೇನೆ.

ದಿನಾಂಕ 06.04.2022 ರಂದು ನಿಸ್ಸಂತ್ ಕೊಠಡಿಯಿಂದ ಬಂದ ಸಂದೇಶದ ಮೇರೆಗೆ ಚನ್ನಪಟ್ಟಣ ಸರ್ಕಾರಿ ಆಸ್ಪತ್ರೆಗೆ ಭೇಟಿ ನೀಡಿ ಗಾಯಾಳುರವರಾದ ಚಾಸಾ1 ರವರ ಹೇಳಿಕೆಯನ್ನು ಚನ್ನಪಟ್ಟಣ ಸರ್ಕಾರಿ ಆಸ್ಪತ್ರೆಯಲ್ಲಿ ಪಡೆದಿರುತ್ತೇನೆ. ಅದೇ ದಿನ ಠಾಣೆಗೆ ಹಿಂದಿರುಗಿ ಸಿ ಆರ್ 33/2022 ರಂತೆ ಪ್ರಕರಣ ದಾಖಲಿಸಿ, ಪ್ರಥಮ ವರ್ತಮಾನ ವರದಿಯನ್ನು ದಾಖಲಿಸಿರುತ್ತೇನೆ ಮತ್ತು ನಮ್ಮ ಮೇಲಾಧಿಕಾರಿಯವರಿಗೆ ನಿವೇದಿಸಿಕೊಂಡಿರುತ್ತೇನೆ. ಸಾಕ್ಷಿಗೆ ದೂರನ್ನು ತೋರಿಸುತ್ತಿದ್ದು ಅದನ್ನು ಈಗಾಗಲೇ ನಿಪಿ-1 ಎಂದು ಅದರಲ್ಲಿರುವ ಸಾಕ್ಷಿಯ ಸಹಿಯನ್ನು ನಿಪಿ-1(ಬಿ) ಎಂದು ಗುರುತಿಸಲಾಯಿತು. ಸಾಕ್ಷಿಯು ಪ್ರಥಮ ವರ್ತಮಾನ ವರದಿಯನ್ನು ಮತ್ತು ಅದರಲ್ಲಿರುವ ಸಹಿಯನ್ನು ನೋಡಿ ಗುರುತಿಸಿದ್ದು ಪ್ರಥಮ ವರ್ತಮಾನ ವರದಿಯನ್ನು ನಿಪಿ-4 ಎಂದು, ಸಾಕ್ಷಿಯ ಸಹಿಯನ್ನು ನಿಪಿ-4(ಎ) ಎಂದು ಗುರುತಿಸಲಾಯಿತು.

ದಿಃ07.04.2022 ರಂದು ಕೃತ್ಯ ನಡೆದ ಸ್ಥಳಕ್ಕೆ ಭೇಟಿ ನೀಡಿ ಚಾಸಾ-5

ಮತ್ತು 6 ರವರಿಗೆ ಪಂಚರಾಗಿ ಬರಮಾಡಿಕೊಂಡು ಚಾಸಾ2 ರವರು ತೋರಿಸಿದ ಸ್ಥಳವಾದ ಪ್ರೇಮಮ್ಮ ರವರ ಜಮೀನಿನ ಬದಿಯಲ್ಲಿ ಬೆಳಗ್ಗೆ 11.00-11.45 ಗಂಟೆಯವರೆಗೆ ಮಹಜರ್ ಕ್ರಮವನ್ನು ಕೈಗೊಂಡಿರುತ್ತೇನೆ. ಆ ಘಟನಾ ಸ್ಥಳದಲ್ಲಿ 2 ಕಾಡು ಜಾತಿಯ ದೊಣ್ಣೆಗಳನ್ನು  ಅಮಾನತ್ತು ಪಡಿಸಿರುತ್ತೇನೆ. ಸದರಿ ಸ್ಥಳ ಮಹಜರನ್ನು ನೋಡಿ ಗುರುತಿಸಿದ್ದು ಅದನ್ನು ಈಗಾಗಲೇ ನಿಪಿ-2 ಎಂದು ಗುರುತಿಸಲಾಗಿದ್ದು ಸಾಕ್ಷಿಯ ಸಹಿಯನ್ನು ನಿಪಿ-2(ಡಿ) ಎಂದು ಗುರುತಿಸಲಾಯಿತು. ಈಗ ನ್ಯಾಯಾಲಯದ ಮುಂದೆ ಇರುವ  ದೊಣ್ಣೆಗಳನ್ನು ನೋಡಿ ಗುರುತಿಸಿದ್ದು ಅದನ್ನು ಈಗಾಗಲೇ ಮು ಮಾ 1  ಮತ್ತು 2 ಎಂದು ಗುರುತಿಸಲಾಗಿದೆ.

ದಿಃ02.05.2022 ರಂದು ಗಾಯಾಳುವಾದ ಚಾಸಾ1 ರವರ ಮುಂದುವರೆದ ಹೇಳಿಕೆಯನ್ನು ಪಡೆದುಕೊಂಡಿರುತ್ತೇನೆ. ಅದೇ ಚಾಸಾ2 ರಿಂದ 4 ರವರ ಹೇಳಿಕೆಗಳನ್ನು  ಹೇಳಿಕೆಯನ್ನು ಪಡೆದು ಕಡತಕ್ಕೆ ಅಳವಡಿಸಿಕೊಂಡಿರುತ್ತೇನೆ.

ದಿಃ11.05.2022 ರಂದು ಚನ್ನಪಟ್ಟಣ ಸರ್ಕಾರಿ ಆಸ್ಪತ್ರೆಗೆ ಭೇಟಿ ನೀಡಿ ಚಾಸಾ1 ರವರ ಗಾಯದ ಪ್ರಮಾಣ ಪತ್ರವನ್ನು ಪಡೆದು ಕಡತಕ್ಕೆ ಅಳವಡಿಸಿಕೊಂಡಿರುತ್ತೇನೆ.  ಸಾಕ್ಷಿಯು ರ ಗಾಯದ ಪ್ರಮಾಣ ಪತ್ರವನ್ನು ನೋಡುತ್ತಿದ್ದು ಅದನ್ನು ಈಗಾಗಲೇ ನಿಪಿ-3 ಎಂದು ಗುರುತಿಸಲಾಗಿದ್ದು, ಅದರಲ್ಲಿರುವ ನನ್ನ ಸಹಿಯನ್ನು ನಿಪಿ-3(ಬಿ) ಎಂದು ಗುರುತಿಸಲಾಯಿತು.

ಆರೋಪಿತರ ಮೇಲೆ ಸಾಕ್ಷಾದಾರಗಳು ಸಾಬೀತದಾತ ಕಾರಣ ಆರೋಪಿತರ ವಿರುದ್ದ ದಿಃ11.05.2022 ರಂದು ದೋಷಾರೋಪಣಾ ಪಟ್ಟಿಯನ್ನು ತಯಾರಿಸಿ ನ್ಯಾಯಾಲಯಕ್ಕೆ ಸಲ್ಲಿಸಿರುತ್ತೇನೆ.

**ಪಾಟೀ ಸವಾಲುಃ ಆರೋಪಿತರ ಪರ ಶ್ರೀ      ವಕೀಲರಿಂದಃ**

ನಿಸ್ಸಂತ್ ಸಂದೇಶ ಬರಬೇಕಾದರೆ ನನಗೆ ಆಸ್ಪತ್ರೆಯಿಂದ ಎಂ ಎಲ್ ಸಿ ಬಂದಿರುತ್ತದೆ ಎಂದರೆ ನಿಜ. ನಾನು ಸದರಿ ಪ್ರಕರಣಕ್ಕೆ ಸಂಬಂದಪಟ್ಟಂತೆ  ಎಂ ಎಲ್ ಸಿಯನ್ನು ಪಡೆದುಕೊಂಡಿರುತ್ತೇನೆ. ಈ ಬಗ್ಗೆ ಪ್ರಕರಣದಲ್ಲಿ ನಮೂದು ಮಾಡಿಲ್ಲ. ಆಸ್ಪತ್ರೆಯಲ್ಲಿ ಗಾಯಾಳು ಹೇಳಿಕೆ ಪಡೆಯಬೇಕಾದರೆ ವೈದ್ಯರ ಅನುಮತಿ ಬೇಕಾಗುತ್ತದೆ ನಿಜ. ಸದರಿ ಪ್ರಕರಣದಲ್ಲಿ ವೈದ್ಯರ ಅನುಮತಿ ಪಡೆದಿಲ್ಲ.  ವೈದ್ಯರ ಅನುಮತಿ ಇಲ್ಲದೇ ಹೇಳಿಕೆ ಪಡೆಯುವ ಹಾಗೆ ಇಲ್ಲ ಎಂದರೆ ಸಾಕ್ಷಿಯು

ಅವಶ್ಯಕತೆ ಇಲ್ಲ ಎಂದು ನುಡಿಯುತ್ತಾರೆ. ದಿಃ06.04.2022 ರಂದು ಮಧ್ಯಾಹ್ನ 2.30 ಕ್ಕೆ ಹಲ್ಲೆ ಆಗಿದೆ ಎಂದು ಚಾಸಾ1ರವರು ಹೇಳಿಕೆಯಲ್ಲಿ ತಿಳಿಸಿರುತ್ತಾರೆಂದರೆ ನಿಜ.

ದಿಃ07.04.2022 ರಂದು ಕೃತ್ಯ ನಡೆದ ಸ್ಥಳಕ್ಕೆ ಭೇಟಿ ನೀಡುವ ಸಮಯಕ್ಕೆ ಪಂಚರಿಗೆ ನೋಟೀಸ್ ನೀಡಿಲ್ಲ. ಸದರಿ ಕೃತ್ಯ ನಡೆದ ಸ್ಥಳದ ಜಮೀನಿನ ದಾಖಲೆಯನ್ನು ಪಡೆದಿಲ್ಲ. ಮಹಜರ್ ನಲ್ಲಿ ಕೃತ್ಯ ನಡೆದ ಸ್ಥಳದ ಜಮೀನಿನ ಸರ್ವೆ ನಂಬರ್ ನಮೂದು ಮಾಡಿಲ್ಲ ಎಂದರೆ ನಿಜ. ಮು ಮಾ 1 ಮತ್ತು 2 ರ ಮೇಲೆ ಚಾಸಾ2,5 ಮತ್ತು 6 ರವರುಗಳ ಸಹಿಗಳನ್ನು ಪಡೆದಿಲ್ಲ.

ಮು ಮಾ 1 ಮತ್ತು 2 ಅನ್ನು ವೈದ್ಯಾಧಿಕಾರಿಯವರ ಮುಂದೆ ಹಾಜರುಪಡಿಸಿ ವಿಚಾರಣೆ ನಡೆಸಿಲ್ಲ. ನಿಪಿ-3 ರ ಗಾಯದ ಪ್ರಮಾಣ ಪತ್ರದಲ್ಲಿ ಯಾವ ಆಯುಧದಿಂದ ಮತ್ತು ಯಾರು ಹಲ್ಲೆ ಮಾಡಿದರು ಎಂದು ನಮೂದು ಇಲ್ಲ ಎಂದರೆ ನಿಜ. ಚಾಸಾ-1 ರವರು ಚಿಕಿತ್ಸೆ ಪಡೆಯುವಾಗ ಮದ್ಯಪಾನ ಮಾಡಿದ್ದರು ಎಂದು ನಿಪಿ-3 ರ ಗಾಯದ ಪ್ರಮಾಣ ಪತ್ರದಲ್ಲಿ ನಮೂದು ಇದೆ ಎಂದರೆ ಗೊತ್ತಿಲ್ಲ. ನಾನು ದೂರುದಾರರ ಮತ್ತು ಸಾಕ್ಷಿದಾರರ ಯಾವುದೇ ಹೇಳಿಕೆ ಪಡೆದಿಲ್ಲ ಎಂದರೆ ಸುಳ್ಳು. ಆರೋಪಿತರು ಯಾವುದೇ ಗಲಾಟೆ ಮಾಡಿಲ್ಲ ಎಂದರೆ ಸುಳ್ಳು. ಚಾಸಾ1 ರವ ರು ಮದ್ಯಪಾನ ಮಾಡಿ ತಾನೇ ಬಿದ್ದು ಪೆಟ್ಟು ಮಾಡಿಕೊಂಡಿರುತ್ತಾರೆಂದರೆ ಸುಳ್ಳು. ಆರೋಪಿತರಿಗೆ ತೊಂದರೆ ಕೊಡಲು ಸುಳ್ಳು ಆರೋಪಿ ಪಟ್ಟಿಯನ್ನು ಸಲ್ಲಿಸಿರುತ್ತೇನೇಂದರೆ ಸುಳ್ಳು.

**ಮರುವಿಚಾರಣೆಃ ಇಲ್ಲ**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನವನ್ನು ಗಣಕೀಕರಣ ಮಾಡಲಾಯಿತು)**Na**

ಓ.ಹೇ.ಕೇ.ಸ.ಒ

**(ವೆಂಕಟೇಶಪ್ಪ. ವಿ)**
**ಪ್ರಧಾನ ಹಿರಿಯ ಸಿವಿಲ್ ನ್ಯಾಯಾಧೀಶರು**
**ಮತ್ತು ಜೆ.ಎಂ.ಎಫ್.ಸಿ.,ಚನ್ನಪಟ್ಟಣ.**